Indian Journal of History and Archaeology

ISSN (E):2582-225X
VOL-2, ISSUE -1, MAY -JUNE, 2020, 06-11

# 19ನೇ ಶತಮಾನದ ಕರ್ನಾಟಕ ಸಾಂಸ್ಕೃತಿಕ ಪರಿವರ್ತನೆ

**ಡಾ.ಮೋಹನ.ಎಚ್.ಎಂ.**

**ಡಾ.ಮೋಹನ.ಎಚ್.ಎಂ.**
ಎಂ 12, ಹತ್ತನೇ ಅಡ್ಡರಸ್ತೆ,
ಜೆಸಿಇ ಕಾಲೇಜು ಮುಂಬಾಗ,
ಮಾನಸಗಂಗೋತ್ರಿ, ಮೈಸೂರು-06

ಭಾರತವು ಜಗತ್ತಿನಲ್ಲಿಯೇ ಬಹುಸಂಸ್ಕೃತಿಗಳ ದೇಶವೇ ಆಗಿರುತ್ತದೆ. ಇದೊಂದು ಉಪಸಂಸ್ಕೃತಿಗಳ ದೇಶ; ಈ ಸಂಸ್ಕೃತಿಯೆನ್ನುವುದೇ ಉಪಸಂಸ್ಕೃತಿಗಳ ಒಂದು ಒಕ್ಕೂಟ. ಇನ್ನೂ ಮುಂದುವರೆದು ಹೇಳುವುದಾದರೆ; ಭಾರತ ದೇಶವು ಉಪಸಂಸ್ಕೃತಿಗಳ ವಿಶ್ವ. ಭಾರತಕ್ಕೆ ಹೋಲಿಸಿದರೆ, ಕರ್ನಾಟಕವೇ ಒಂದು ಉಪಸಂಸ್ಕೃತಿ. ವಿಶ್ವಕ್ಕೆ ಹೋಲಿಸಿದರೆ ಭಾರತವು ಒಂದು ಉಪಸಂಸ್ಕೃತಿ. ವಿಶ್ವಕ್ಕೆ ಉಪಸಂಸ್ಕೃತಿಯನ್ನು ನೀಡಿರುವ ಭಾರತದಲ್ಲಿ ಕರ್ನಾಟಕವು ತನ್ನೊಳಗೆ ನೂರಾರು ಸಂಸ್ಕೃತಿಗಳನ್ನು ಒಳಗೊಂಡಿರುವುದೇ ಒಂದು ವಿಶಿಷ್ಟ. ಇದು ಭಾರತ ದೇಶಕ್ಕೆ ವಿಶಿಷ್ಟ್ಯದೇ ಆಗಿದೆ. ಹಾಗೆಯೇ ತನ್ನ ಸಾಂಸ್ಕೃತಿಕ ನೆಲೆಗಳನ್ನು ನೀಡಿರುತ್ತದೆ.

ಭವ್ಯ ಭಾರತದ ಅಮೂಲ್ಯವಾದಂಥ ಸಂಪತ್ತು ಸಂಸ್ಕೃತಿ ಮತ್ತು ಬಹುಸಂಸ್ಕೃತಿ. ಹಾಗೆಯೇ, ಕರ್ನಾಟಕವೂ ಕೂಡ ಇತರೆ ರಾಜ್ಯಗಳಗಿಂತಲೂ ಇದೇ ಮಾದರಿಯಲ್ಲಿದೆ. ಸಂಸ್ಕೃತಿಯೂ ಯಾವಾಗಲೂ ಪರಿವರ್ತನಾ ಶೀಲವಾದರೂ ಅದರ ಭೌತಿಕ ಹಾಗೂ ಅಭೌತಿಕ ಅಂಶಗಳು ಒಂದೇ ವೇಗದಲ್ಲಿ ಬದಲಾವಣೆಯನ್ನು ಹೊಂದುವುದಿಲ್ಲ. ಅಂದರೆ, ಭೌತಿಕ ಸಂಸ್ಕೃತಿಯು ನಾಗರಿಕತೆಯ ರೂಪದಲ್ಲಿ (ಮನೆಕಟ್ಟುವುದು) ವೇಗವಾಗಿ ಬದಲಾವಣೆ ಹೊಂದಿದಾಗ, ಅಭೌತಿಕ ಸಂಸ್ಕೃತಿಯು ಆಂತರಿಕ ರೂಪದಲ್ಲಿ (ವಿವಾಹ ಪದ್ಧತಿ, ನಂಬಿಕೆ, ರೂಢಿ, ಸಂಪ್ರದಾಯಗಳು) ನಿಧಾನವಾಗಿ ಬದಲಾವಣೆ ಹೊಂದುತ್ತವೆ. ಅಂದರೆ, ಬಾಹ್ಯ ಬದಲಾವಣೆಯಿಂದ ಆಂತರಿಕ ಬದಲಾವಣೆಯು ಅನಿವಾರ್ಯವಾಗಬಹುದು. ಹಾಗೆಯೇ, ಸಂಸ್ಕೃತಿಯ ಭೌತಿಕ ಮತ್ತು ಅಭೌತಿಕ ಅಂಶಗಳ ರೂಪವನ್ನು ವಿಶಾಲ ಅರ್ಥದಲ್ಲಿ **ಸಾಂಸ್ಕೃತಿಕ** ಎನ್ನಬಹುದು. ಸಂಸ್ಕೃತಿಯ

ಸಾಧನಾ ರೂಪಿಯಾಗಿ ಸಾಂಸ್ಕೃತಿಕ ಪ್ರಚಲಿತವಾಗಿರುತ್ತದೆ. ಸಂಸ್ಕೃತಿಯು ಒಳಗೊಂಡಿರುವಂಥ ಮೌಲ್ಯಗಳು, ನಿಯಮಗಳು, ನಂಬಿಕೆಗಳು, ಆಚರಣೆಗಳು, ಆದರ್ಶಗಳು, ಊಟೋಪಚಾರಗಳು, ಉಡುಪುಗಳು, ಆಚಾರ–ವಿಚಾರ, ಕಲೆ, ಸಾಹಿತ್ಯ, ನೃತ್ಯ ಹೀಗೆ ಮನರಂಜನೆ ಹಾಗೂ ವಿನೋದದಂಥ ಎಲ್ಲ ತೆರೆನಾಗಿರುವ ಬಹುಶಿಸ್ತಿಯ ನೆಲೆಗಳಲ್ಲಿನ ಪ್ರಧಾನವಾದಂಥ ವಿಷಯಗಳು ಈ ಸಾಂಸ್ಕೃತಿಕ ಅಂಶಗಳೇ ಆಗಿರುತ್ತವೆ. ಡಬ್ಲ್ಯೂ.ಪಿ. ಸ್ಕಾಟ್ಟ್ ಅವರ ಪ್ರಕಾರ; ಸಂಸ್ಕೃತಿ ಅಥವಾ ಉಪಸಂಸ್ಕೃತಿಯೊಂದಕ್ಕೆ ಒಂದು ವಿಶಿಷ್ಟ ಸ್ವರೂಪ ಗುಣಗಳನ್ನು ಅಥವಾ ಅಸ್ಮಿತೆಯನ್ನು (ತನ್ನ, ತನವನ್ನು) ನೀಡಲು ಸಹಾಯಕವಾದಂಥ ಪ್ರಬಲವಾದ ವಿಚಾರಗಳು, ಮೌಲ್ಯಗಳು ಹಾಗೂ ಅಲ್ಲಿನ ಆದರ್ಶಗಳ ಸಮಷ್ಠಿಯನ್ನು ಸಾಂಸ್ಕೃತಿಕ ಗುಣವಿಶೇಷವೇ ಎನ್ನಬಹುದು. ಒಟ್ಟಾರೆಯಾಗಿ, ಸಾಂಸ್ಕೃತಿಕ ಅಂಶಗಳ ಮೊತ್ತವೇ ಸಂಸ್ಕೃತಿ ಎಂದು, ಸಂಸ್ಕೃತಿ ಅಂಶಗಳೇ ಸಾಂಸ್ಕೃತಿಕ ಅಂಶಗಳು ಕೂಡ ಎಂದು ಹೇಳಬಹುದು. ಈ ನೆಲೆ – ಹಿನ್ನೆಲೆಯೊಳಗೆ ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಪ್ರಧಾನವಾಗಿ **19ನೇ ಶತಮಾನದ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಪರಿವರ್ತನೆ**ಯನ್ನು ಈ ಮುಂದಿನಂತೆ ಪರಿವೀಕ್ಷಿಸಲಾಗಿರುತ್ತದೆ.

ಭಾರತಕ್ಕೆ ಬ್ರಿಟಿಷರ ಆಗಮನದ ಅನಂತರ ದೇಶಿಯ, ಸ್ಥಳೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಮೇಲೆ ಅಪಾರವಾಂಥ ಪ್ರಭಾವ ಮತ್ತು ಪರಿಣಾಮವನ್ನು ಬೀರಿರುತ್ತದೆ. ಅದು ಭಾರತವನ್ನು ಬ್ರಿಟಿಷ್ ಪ್ರಭುತ್ವವು ಆಕ್ರಮಣ ಮಾಡಿಕೊಂಡು ಅದರ ವಸಾಹತುಶಾಹಿಯ ಕಾನೂನು, ಸಂಸ್ಕೃತಿ ಮತ್ತು ಸಿದ್ಧಾಂತವು ದೇಶಿಯ ಮತ್ತು ಸ್ಥಳೀಯ ಮೂಲದ ಸಂಸ್ಕೃತಿ ಮತ್ತು ಭವ್ಯ ಪರಂಪರೆಯುಳ್ಳಂಥ ನಾಗರಿಕತೆಯ ಶಕ್ತಿ ಮತ್ತು ದೌರ್ಬಲ್ಯದ ಬಗೆಗೆ ಆತ್ಮಾವಲೋಕನ ಮಾಡಿಕೊಳ್ಳಲ್ಲಕ್ಕೆ ಪ್ರಮುಖ ಕಾರಣವೇ ಆಗಿರುತ್ತದೆ.

ಒಬ್ಬ ವ್ಯಕ್ತಿ ತಾನು ಇರುವಂಥ ಪರಿಸರ, ಬೌದ್ಧಿಕ ವಲಯ, ಸಾಂಸ್ಕೃತಿಕ ಸ್ಥಿತ್ಯಂತರಗಳು, ಧರ್ಮ, ಪ್ರಸಾರ, ನೀತಿ, ನಿಯಮಗಳ ವ್ಯಾಪಾರಿ ಮನೋಭಾವವನ್ನು ಅನೇಕ ಸಂದರ್ಭಗಳಲ್ಲಿ ಜಮೀನ್ದಾರಿ ವ್ಯವಸ್ಥೆಯಲ್ಲಿನ ದುರ್ಬಲ ಕೂಲಿ ಕಾರ್ಮಿಕರ ಶೋಚನೀಯ ಬದುಕಿನ ಗೌಣವಾಗಿರುವಂಥ ಪರಿಸ್ಥಿತಿಯನ್ನು ಇಲ್ಲಿ ಕಾಣಬಹುದು. ಕರ್ನಾಟಕದ ಸನ್ನಿವೇಶದಲ್ಲಂತೂ ಸಾಂಸ್ಕೃತಿಕ ಪರಿವರ್ತನೆ ಮರುಚಿಂತನೆಯ ಅಗತ್ಯ ಅತೀ ಜರೂರಿನ ನಡೆಯಂದೇ ಹೇಳಬಹುದು. ಕರ್ನಾಟಕ ಸಂಸ್ಕೃತಿ, ನುಡಿ, ಸಾಹಿತ್ಯ, ಸಮಾಜ, ಚರಿತ್ರೆಯಂಥವುಗಳನ್ನು ಬಿಡಿಬಿಡಿಯಾಗಿ ತಳಸ್ಪರ್ಶಿಯಾಗಿಯೇ ಬಿಡಿಸಿ ನೋಡುವ ರೂಢಿಗಳು ಬಲಗೊಂಡಿದೆ. ಇದರಿಂದಲೇ ಸಾಂಸ್ಕೃತಿಕ ಪರಂಪರೆಯ ಮೇಲರಿಮೆಯನ್ನು ಮತ್ತೇ ಮತ್ತೇ ಗುರುತ್ತಿಸಲು ಸಾಧ್ಯವೇ ಆಗಿರುತ್ತದೆ.

ವಸಾಹತುಶಾಹಿ ವ್ಯವಸ್ಥೆಯ ಆಡಳಿತದ ಕಾಲಸಂದರ್ಭದಲ್ಲಿ ಈ ಕನ್ನಡ ನೆಲೆದ ಭಾಷೆ, ಕಲೆ, ವಾಸ್ತುಶಿಲ್ಪ, ಸಂಸ್ಕೃತಿ, ಜ್ಞಾನ, ಪರಂಪರೆ, ಧರ್ಮ ಮತ್ತು ನಂಬಿಕೆಗಳನ್ನು ಪ್ರಧಾನವಾಗಿ ನಿಯಂತ್ರಿಸಲ್ಪಡಲು ಪ್ರಯತ್ನಿಸಿತ್ತು. ಆವಾಗ ಕರ್ನಾಟಕದಲ್ಲಿ ಸಾಂಸ್ಕೃತಿಕ ಪರಿವರ್ತನೆಗೆ ನಾಂದಿಯಾಗಿರುತ್ತದೆ. ಬಲವಂತವಾಗಿ ತನ್ನದಲ್ಲದ ವ್ಯವಸ್ಥೆಗೆ ಹೊಂದಿಕೊಳ್ಳುವ ಅಥವಾ ಬದಲಾವಣೆಗೊಳ್ಳುವಂಥ ಪರಿಸ್ಥಿತಿಯೂ ನಿರ್ಮಾಣಗೊಂಡಿತ್ತು. ಆವಾಗ ಸ್ಥಳೀಯ ಭಾಷೆಯು ಮಂಕಾಗಿ ಆಂಗ್ಲಭಾಷೆಯು ತನ್ನ ಮೇಲುಗೈಯನ್ನು ಸಾಧಿಸಿತ್ತು. ಸ್ಥಳೀಯ ಭಾಷೆಯು ತನ್ನೊಳಗಿನ ಭಾಷೆಯಾಗಿ ಸೀಮಿತಗೊಂಡಿತ್ತು. ಇಲ್ಲಿನ ಜನರ ಜೀವನ ಕ್ರಮದಲ್ಲಿ, ಸೇವಿಸುವ ಆಹಾರ, ಉಡುವ ಬಟ್ಟೆಗಳಲ್ಲಿ, ಧರಿಸುವ ಆಭರಣಗಳಲ್ಲಿ, ದೇಶಿಯ ಕಲೆಗಳಲ್ಲಿ, ವಾಸ್ತುಶಿಲ್ಪಗಲ್ಲಿ, ಬರಹಗಳಲ್ಲಿ ಹೀಗೆ, ತನ್ನದಲ್ಲದ ಒಂದು ಬೇರೆಯಾದ ವ್ಯವಸ್ಥೆಗೆ ಪರಿವರ್ತನೆಗೊಳ್ಳಲಾಗಿದೆ. ಹಾಗೆಯೇ, ಬದುಕಿನ ಕ್ರಮದಿಂದ ಹಿಡಿದು ಪ್ರತಿಯೊಂದರಲ್ಲಿಯೂ ಆಗಾಧವಾಗಿಯೇ ಪಾಶ್ಚಾತ್ಯರ ಪ್ರೇರಣೆ ಹಾಗೂ ಪ್ರಭಾವವು ಹೆಚ್ಚಿನ ರೀತಿಯಲ್ಲಿ ಬೀರಿರುವುದರಿಂದಲೇ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯು ಕೂಡ ಸ್ಥಿತ್ಯಂತರಗೊಳ್ಳಲು ಅಥವಾ ಪರಿವರ್ತನೆಗೊಂಡಿತ್ತದೆ. ಹೀಗೆ, ಪರಿವರ್ತಗೊಳ್ಳುವ ಮೂಲಕ ಹೊಸದೊಂದು ಯುಗ ಮಂತ್ರಕ್ಕೆ ಇದು ನಾಂದಿಯಾಗಿರುತ್ತದೆ.

**ಕರ್ನಾಟಕದ ಸಾಂಸ್ಕೃತಿಕ ಪರಂಪರೆ**

ಭಾರತ ದೇಶದಲ್ಲಿನ ದಕ್ಷಿಣ ರಾಜ್ಯಗಳ ಪೈಕಿ ಕರ್ನಾಟ ರಾಜ್ಯವು ಭಿನ್ನ, ವಿಭಿನ್ನ ಕಲೆಗಳು, ವಾಸ್ತುಶಿಲ್ಪಗಳು, ಸಾಹಿತ್ಯಗಳು, ಭಾಷಾ ಮತ್ತು ಧಾರ್ಮಿಕತೆಯ ಬದುಕಿನಲ್ಲಿ ಜನಾಂಗೀಯವಾಗಿ ಸುಧೀರ್ಘವಾದಂಥ ಇತಿಹಾಸವನ್ನು ತಿಳಿಸಲ್ಪಟ್ಟ ಒಂದು ವಿಶಿಷ್ಟವಾದ ಕಲೆಯ ಸಾಂಸ್ಕೃತಿಕ ನೆಲೆಯನ್ನು ಹೊಂದಿದೆ. ಹಾಗಾಗಿಯೇ, ಕರ್ನಾಟಕದ ತಾಳ ಮೇಳಗಳು, ಕಲೆ, ಸಾಹಿತ್ಯ, ಭಾಷೆ, ನೆಲ, ಜಲ, ಧರ್ಮ, ಸಾಮಾಜಿಕ ಪರಿಸರ, ಸಂಪ್ರದಾಯ ಹಾಗೂ ಸಂಸ್ಕೃತಿ ಎಲ್ಲವೂ ವೈವಿಧ್ಯಮಯ. ಅದೇ ಈ ಪ್ರದೇಶದ ಚೆಲುವು ಎನ್ನಬಹುದು. ಇತಿಹಾಸ ಕಾಲದಿಂದ ಈ ಮಣ್ಣಿನಲ್ಲಿ ವೈಶಿಷ್ಟ್ಯಮಯ ಸಾಂಸ್ಕೃತಿಕ ಬದುಕು ರೂಪುಗೊಂಡು ಬೆಳೆದು ಬಂದಿರುವುದು ಸುಸ್ಪಷ್ಟ. ಹಲವು ಹತ್ತು ಮತ ಧರ್ಮಗಳ ಸಂಗಮದ ಸ್ಥಾನವಾಗಿ, ಪರಧರ್ಮಸಹಿಷ್ಣುತೆಗೆ ಹೆಸರುವಾಸಿಯೇ ಆಗಿರುತ್ತವೆ. ಈ ವೈವಿಧ್ಯಮಯ ಸಾಂಸ್ಕೃತಿಕ ಜನವಸತಿಯಿರುವ ಕರ್ನಾಟಕದಲ್ಲಿ ಕೆಲವು ಭಿನ್ನಾಭಿಪ್ರಾಯಗಳನ್ನು ಬಿಟ್ಟರೆ ಶಾಂತಿ ಸಹನೆಯ ಜೀವನವನ್ನು ಕಾಣಬಹುದು.

**ಸಂಸ್ಕೃತಿ** ಎಂಬುದು ಜೀವನ ವಿಧಾನವಾಗಿರುವುದರಿಂದ ಅದು ಇಲ್ಲಿರುವರ ಮೂಲಭೂತ ಅವಶ್ಯಕತೆಯನ್ನು ಪೂರೈಸುವುದರೊಂದಿಗೆ ಜೀವನವನ್ನು ಅತ್ಯಂತ ಮಾನವ ನಿರ್ಮಿತ ಮತ್ತು ಕೇಂದ್ರ ನೆಲೆಯಿಂದ ಪ್ರಧಾನವಾಗಿ ನಿರ್ದೇಶಿಸುತ್ತದೆ. ಈ ಹಿನ್ನೆಲೆ ಮತ್ತು ನೆಲೆಯಲ್ಲಿ ಗುರುತಿಸಬಹುದಾದ ಈ ಧರ್ಮಕ್ಕೆ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಬೌದ್ಧ, ಜೈನ, ವೀರಶೈವ ಎಂಬಂಥ ಯಾವ ತೆರೆನಾಗಿರುವಂಥ

ಹೆಸರುಗಳು ಕೂಡ ಕಾಣುವುದಿಲ್ಲ. ಅದೊಂದು ಮಾನವತೆಯ ಪರಮತತ್ವ ಅದನ್ನೇ ಇಲ್ಲಿ ಕಲೆ, ಸಾಹಿತ್ಯ, ಸಂಗೀತಗಳಲ್ಲೆಲ್ಲ ಬಹುಮುಖ್ಯವಾಗಿ ಕಾಣಬಹುದು. ಇದನ್ನು ಹೊರತುಪಡಿಸಿದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಆರೋಗ್ಯದಾಯಕ ಜೀವನವು ಭಿನ್ನವಾಗುತ್ತ ಸಾಗಿದೆ. ಆದರೂ ಇಂದು ಪ್ರತಿಯೊಬ್ಬ ವ್ಯಕ್ತಿಯ ಹಾಗೂ ಅವರ ಸಾಮಾಜಿಕ ಜೀವನವು ಯಾವುದೋ ಒಂದು ಧರ್ಮದ ಪ್ರೇರಣೆ ಹಾಗೂ ಪ್ರಭಾವದಲ್ಲಿ ಸಾಗಿರುವುದರಿಂದ ಇಲ್ಲಿಯ ಸಾಂಸ್ಕೃತಿಕ ಪರಂಪರೆ ಹಾಗೂ ಸ್ಥಿತ್ಯಂತರಗಳಿಗೆ ಆಯಾ ಧರ್ಮ, ಪ್ರಸ್ತುತ ರಾಜಕಾರಣ, ಸಾಮಾಜಿಕ ಜೀವನ, ಶಿಕ್ಷಣ ಪದ್ಧತಿಯಲ್ಲಿ ಉಂಟಾದಂಥ ಕ್ರಾಂತಿಕಾರಕ ಬದಲಾವಣೆಗಳು, ಆರ್ಥಿಕತೆಯ ಹೊಸ ಹೊಸ ನೀತಿಗಳು, ಸಮೂಹ ಮಾಧ್ಯಮಗಳು, ಆಧುನಿಕತೆ ಹಾಗೂ ಭೌಗೋಳಿಕ ಪರಿಸರವು ಕೂಡ ಹೆಚ್ಚಿನ ರೀತಿಯಲ್ಲಿ  ಕಾರಣಗಳಾಗಿರುವುದನ್ನು ಅರಿಯಬಹುದು.

ಶತಶತಮಾನಗಳ ಐತಿಹ್ಯ ಹಾಗೂ ಇತಿಹಾಸ ಹೊಂದಿರುವ ಬಹುಸಂಸ್ಕೃತಿಯ ತವರು ಈ ಕನ್ನಡ ನಾಡು. ಆದ್ದರಿಂದಲೇ ಭಾರತದ ಮಾದರಿಯಲ್ಲಿಯೇ ಕರ್ನಾಟಕವು ಕೂಡ ಉಜ್ವಲ ಧಾರ್ಮಿಕ ಪರಂಪರೆ ಹಾಗೂ ಸಮಾನತೆ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿರುವ ಸಾಂಸ್ಕೃತಿಕ ಪರಂಪರೆಯ ಇತಿಹಾಸ ಗಮನಾರ್ಹವಾಗಿದೆ. ಈ ಕರ್ನಾಟಕ ಪ್ರಾಂತ್ಯವನ್ನು ವಿವಿಧ ಕಾಲಘಟ್ಟಗಳಲ್ಲಿ ಆಳಿ ಹೋಗಿರುವಂಥ ರಾಜಸಂಸ್ಥಾನಗಳಲ್ಲಿ ಸಿಂಹಾಸನರೂಢರಾಗಿದ್ದಂಥ ರಾಜ ಮಹಾರಾಜರು ತಮ್ಮ ತಮ್ಮ ಆಡಳಿತದ ಕಾಲಘಟ್ಟಗಳಲ್ಲಿ ಈ ನಾಡಿನ ಭವ್ಯ ಪರಂಪರೆಯನ್ನು ಚಲುವನ್ನು ಹೆಚ್ಚಿಸಿಯೇ ಹೋಗಿದ್ದಾರೆ. ಹಾಗೆಯೇ, ಕೆಲವು ರಾಜರ ಆಳ್ವಿಕೆಯ ಕಾಲದಲ್ಲಿ ಧಾರ್ಮಿಕ ಸಾಹಿತ್ಯಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಸಾಂಸ್ಕೃತಿಕ ಬದುಕು ಸ್ಥಿತ್ಯಂತರಗೊಂಡಿತು. ಸಾಂಸ್ಕೃತಿಕ ವೇದಿಕೆ ಶ್ರೀಸಾಮಾನ್ಯನೊಂದಿಗೆ ಸಂವಾದಕ್ಕೆ ಸಹಕರಿಸಿ, ಆ ಮೂಲಕ ಆರ್ಥಿಕ ಪ್ರಗತಿಯ ಮಾರ್ಗವನ್ನು ಕೂಡ ಈ ಹಿನ್ನೆಲೆಯಲ್ಲಿ ಕಂಡುಕೊಂಡು, ಸಂವೇದನಾತ್ಮಕ ಸಾಂಸ್ಕೃತಿಕ ಸಾಮರಸ್ಯದ ಮೂಲಕ ಮಾನವನ ಬದುಕಿನ ಬಂಡಿಯ ಸಮಷ್ಠಿ ಪ್ರಗತಿಗೆ ನಾಂದಿಯನ್ನು ಇದು ಹಾಡಿತು. ಧಾರ್ಮಿಕ ವಲಯದಲ್ಲಿ ಮಾನವತೆಯ ಬೀಜ ಮಂತ್ರವನ್ನು ಬಿಡುಗಡೆಯ ಹಾದಿಯಲ್ಲಿ ಭಿತ್ತಿ ಬೆಳೆಯಲು ಪ್ರಯತ್ನಿಸಿದು. ಏಕಮುಖಿ ಸಂಸ್ಕೃತಿ ನಿರ್ಮಾಣಕ್ಕೆ ಕಂಕಣ ಬದ್ಧರಾಗಿದ್ದ ಇವರನ್ನು ದ್ವಿಮುಖ ಸಂಸ್ಕೃತಿ ಸದಾ ಕಾಡಿತು. ಬಹುದಿನಗಳಿಂದ ಸಂರಕ್ಷಿಸಿಕೊಂಡು ಬಂದಿದ್ದ ಅದರ ಹಿಡಿತ ತಪ್ಪುವುದು ಸುಲಭವಾಗಿರಲಿಲ್ಲವಾದರೂ, ಜನಪ್ರಿಯ ಸಂಸ್ಕೃತಿಯನ್ನು ನಿರ್ಮಾಣ ಮಾಡಿತು. ಸಂಸ್ಕೃತಿ ವಸ್ತುಗಳ ಉತ್ಪಾದನೆಯಲ್ಲಿ ವಿವಿಧ ಕಾಯಕ ಜೀವಿಗಳ ಪಾತ್ರ ಪ್ರಧಾನವಾಯಿತು.

ಹಾಗೆಯೇ ಹಲವು ಹತ್ತು ರಾಜ ಸಂಸ್ಥಾನಗಳ ಅಧಿಪತ್ಯವು ಕರ್ನಾಟಕದ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಸ್ಥಿತ್ಯಂತರಗೊಳಿಸಿತು. ಈ ಆಡಳಿತ ಪದ್ಧತಿಯ ರಾಜಕೀಯ ಸಂಸ್ಕೃತಿಯು ಸಾಮ್ರಾಜ್ಯಶಾಹಿಯಾಗಿ ಬಡಜನತೆಯ ವಿಶೇಷವಾಗಿ ಅನ್ಯ ಸಂಸ್ಕೃತಿಯ ಸ್ವರೂಪದ ಮೇಲೆ

ದಾಳಿ ನಡೆಯಿತು. ಇಡೀ ಪ್ರಾಂತ್ಯದಲ್ಲಿಯೇ ಏಕಸ್ವಾಮ್ಯದ ಹಕ್ಕನ್ನು ಪ್ರತಿಪಾದಿಸಿ ತನ್ನನ್ನು ವಿರೋಧಿಸುವವರನ್ನು ಮುಂದುವರೆಯದಂತೆ ನೋಡಿಕೊಂಡಿತು. ಆ ಸಂದರ್ಭದಲ್ಲಿಯ ಇಲ್ಲಿಯ ಜನತೆಯ ಜೀವನದ ಪದ್ಧತಿಯೇ ಬದಲಾಯಿತು.

ಇಂದು ಭಾರತ ದೇಶದಲ್ಲಿ ಕರ್ನಾಟಕವು ಇತರೆ ರಾಜ್ಯಗಳಲ್ಲಿ ಒಂದೆನಿಸಿದ್ದರೂ ಇದು ತನ್ನ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಸಂಪತ್ತಿನಲ್ಲಿ ಹಿರಿದಾಗಿದೆ. ಕರ್ನಾಟಕ ರಾಜ್ಯವು 1,97,791 ಚದುರ ಕಿಲೋಮೀಟರ್‌ನಷ್ಟು ಭೂ ವಿಸ್ತೀರ್ಣವನ್ನು ಹೊಂದುವ ಮೂಲಕ ಭಾರತದಲ್ಲಿಯೇ 8ನೇ ಭೂವಿಸ್ತೀರ್ಣವನ್ನು ಹೊಂದಿರುವಂಥ ದೊಡ್ಡದಾದಂಥ ರಾಜ್ಯವೇ ಆಗಿರುತ್ತದೆ. ಹಾಗೆಯೇ ಕರ್ನಾಟಕ ರಾಜ್ಯವೂ ಪೂರ್ವ – ಪಶ್ಚಿಮ 420 ಮತ್ತು ಉತ್ತರ – ದಕ್ಷಿಣ 760 ಕಿಲೋಮೀಟರ್ ದೂರ ಸುತ್ತುವರಿದಿರುತ್ತದೆ. ಮತ್ತೇ 2011ರ ಜನಗಣತಿಯ ಪ್ರಕಾರ; 6 ಕೋಟಿ 11 ಲಕ್ಷದ 31 ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದೆ. 30 ಜಿಲ್ಲೆಗಳು 175 ತಾಲೋಕುಗಳನ್ನು ಒಳಗೊಂಡಿರುತ್ತದೆ. ಹಾಗೆಯೇ, ಕನ್ನಡ, ತೆಲಗು, ತಮಿಳು, ಉರ್ದು, ಮರಾಠಿ, ತುಳು, ಕೊಡಗು, ಕೊಂಕಣಿ, ಹಿಂದಿ ಹೀಗೆ ಹಲವು ಭಾಷೆಗಳನ್ನು ಮಾತಾನಾಡುವ ಮೂಲಕ ತನ್ನದೇ ಸಾಂಸ್ಕೃತಿಕ ಪರಂಪರೆಯನ್ನು ಕರ್ನಾಟಕವು ಸೃಷ್ಟಿಸಿಕೊಂಡಿರುತ್ತದೆ. ಒಂದು ಭಾಗ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ರಂಗಗಳಲ್ಲಿ ತನ್ನದೇ ಆದಂಥ ವಿಶಿಷ್ಟ ಪರಂಪರೆಯನ್ನು ಹೊಂದಿರುವ ಕರ್ನಾಟಕವು ಕೃಷಿಯಲ್ಲಿ ಪ್ರಧಾನತೆಯನ್ನು ಹಾಗೂ ಪಶುಸಾಗಣಿಕೆಯಲ್ಲಿ ತನ್ನತನವನ್ನು ಮೆರೆದಿದೆ. ಜಾಗತೀಕರಣದ ಈ ಸಂದರ್ಭದಲ್ಲಿ ಶಿಷ್ಟ ಸಂಸ್ಕೃತಿಯೊಂದಿಗೆ ರಾಜಿ ಮಾಡಿಕೊಂಡು ಬಹುಸಮಾಜಗಳ ಬಹುಸಂಸ್ಕೃತಿಯಯುಳ್ಳ ಈ ನೆಲದ ಮೂಲ ಸೆಲೆಯೇ ಆಗಿರುವಂಥ ಜಾನಪದ ಸಂಸ್ಕೃತಿಯನ್ನು ಉಳಿಸಿಕೊಂಡು ಆಧುನಿಕವಾಗಿ ಬೆಳೆಯುತ್ತಿರುವುದು ಗಮನಾರ್ಹ ಅಂಶವೇ ಆಗಿರುತ್ತದೆ. ಇದು ಕೂಡ ಕರ್ನಾಟಕ ರಾಜ್ಯದಲ್ಲಿನ ಸಾಂಸ್ಕೃತಿಕ ಪರಿವರ್ತನೆಯ ಹಾದಿಯೇ ಆಗಿರುತ್ತದೆ.

ಕರ್ನಾಟಕವು ಭಾರತ ದೇಶದಲ್ಲಿಯೇ ವಿಶಿಷ್ಟವಾದಂಥ ಸಾಂಸ್ಕೃತಿಕ ಪರಂಪರೆಯನ್ನು ತನ್ನ ಒಡಲಿನಲ್ಲಿ ಇಟ್ಟು ಬೆಳೆಸಿರುತ್ತದೆ. ಅದಕ್ಕೆ ಸಾಂಸ್ಕೃತಿಕ ಚರಿತ್ರೆಯ ಸಂದರ್ಭದಲ್ಲಿ ತನ್ನದೇ ಆದಂಥ ಸ್ಥಾನವನ್ನು ಕಾಯ್ದಿರಿಸಿಕೊಂಡಿದೆ. ಈ ತೆರೆನಾಗಿರುವಂಥ ನೆಲೆ ಹಿನ್ನೆಲೆಯಲ್ಲಿ ತಳಸ್ಪರ್ಶಿಯಾಗಿ ಗ್ರಹಿಸಿದಾಗ; 19ನೇ ಶತಮಾನವು ಜಗತ್ತಿನಲ್ಲಿ ಒಂದು ಮಾದರಿಯ ಪರಿವರ್ತನೆಯ ಹಾಗೂ ಹೊಸ ಹೊಸ ಪ್ರಯೋಗಗಳು, ಆವಿಷ್ಕಾರಗಳು, ಆಲೋಚನೆಗಳು ಒಡಮೂಡಿರುವಂಥ ಯುಗವೇ ಆಗಿರುತ್ತದೆ. ಈ ತೆರೆನಾದಂಥ ವಿಚಾರಧಾರೆಗಳ ಪ್ರೇರಣೆ ಹಾಗೂ ಪ್ರಭಾವದಿಂದ ಒಂದು ವ್ಯವಸ್ಥೆಯ ಬದಲಾವಣೆಗೆ ಪ್ರಮುಖ ಕಾರಣವೂ ಕೂಡ ಇದೇ ಆಗಿರುತ್ತದೆ. ತನ್ನ ಮೂಲದಲ್ಲಿದ್ದಂಥ ಪರಿಸ್ಥಿತಿಯಿಂದ ಅಮೂಲಗ್ರವಾದ ಬದಲಾವಣೆಯನ್ನು ಹೊಂದುತ್ತದೆ. ಅದನ್ನು ಪರಿವರ್ತನೆ ಅಥವಾ ಟ್ರಾನ್ಸಿಸನ್ ಎಂದು ಕೂಡ ಕರೆಯಲಾಗುವುದು.

ಪ್ರತಿಯೊಬ್ಬ ಮಾನವನು ಕೂಡ ತನ್ನ ವರ್ತನೆಯಿಂದ ಒಂದು ಹೊಸ ಮಾದರಿಯನ್ನು ಸೃಷ್ಟಿಸುತ್ತಾನೆ ಅಥವಾ ಅಸ್ತಿತ್ವದಲ್ಲಿರುವ ಒಂದು ವ್ಯವಸ್ಥೆಯನ್ನು ಬದಲಾಯಿಸಲಾಗಿರುತ್ತದೆ. ಹಾಗೆಯೇ, ಈ ಹೊಸತನವನ್ನು ಮತ್ತೊಂದು ಈ ಮಾದರಿಯನ್ನು ರವಾನಿಸುತ್ತಾನೆ. ಹಾಗಾಗಿ ಮಾದರಿಯ ರೂಪದಲ್ಲಿ ಬಹುಶಃ ಗುರುತಿಸಬಹುದಾದ ಶೈಲಿಯ ವೈಶಿಷ್ಟತೆಗಳ ವಿಷಯದಲ್ಲಿ ಪ್ರದರ್ಶಕರ ಒಳಗೆ ಮತ್ತು ಅಡ್ಡವಾಗಿ ಸ್ಥಿರವಾಗಿರುತ್ತದೆ. ಈ ತೆರೆನಾಗಿರುವಂಥ ಮಾದರಿ ಹೊಂದುವ ಒಬ್ಬ ವ್ಯಕ್ತಿಯು ಒಂದು ದೀರ್ಘವಾಗಿ ಸ್ವಾಧೀನ ಪಡಿಸಿಕೊಂಡಿರುತ್ತಾನೆ. ಅನಂತರ ಅದನ್ನು ನಿರ್ವಹಿಸಲು ತನ್ನದೇ ಆದಂಥ ಸಾಮರ್ಥ್ಯವನ್ನು ಉಳಿಸಿಕೊಂಡಿತ್ತದೆ. ಈ ಮಾದರಿಯು ಜನಸಮೂಹದ ಸಾಮಾಜಿಕ ಘಟಕಗಳಿಗೆ ಹರಡಿರುತ್ತದೆ. ಈ ಸಾಮಾಜಿಕ ಘಟಕಗಳು ಯಾವುವೆಂದರೆ; ಕುಟುಂಬಗಳು, ಕುಲಗಳು, ಪಡೆಗಳು ಅಥವಾ ಗುಂಪುಗಳು ಇರಬಹುದು. ಈ ಮಾದರಿಯೂ ತಲೆಮಾರುಗಳ ಮೂಲಕ ತಂದಂಥ ರಮ್ಯತೆಯು ಇಂದಿಗೂ ಉಳಿದು ಬೆಳೆದುಕೊಂಡು ಬಂದಿರುತ್ತದೆ. ಇದನ್ನೇ ಒಟ್ಟಾರೆಯಾಗಿ, ಸಾಂಸ್ಕೃತಿಕ ಪರಿವರ್ತನೆ, ಸ್ಥಿತ್ಯಂತರ ಹಾಗೂ ಬದಲಾವಣೆಯೆಂದು ಸಾಭಿತುಪಡಿಸಬಹುದು.

**ಪರಾಮರ್ಶನ ಗ್ರಂಥಗಳು**

1. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, 1984

2. ಕರ್ನಾಟಕ ಕೈಪಿಡಿ, 2015

3. ಬಸವರಾಜ ಕಲ್ಗುಡಿ, ಕರ್ನಾಟಕ ಸಂಸ್ಕೃತಿ ಅಧ್ಯಯನದ ಸಮಸ್ಯೆಗಳು, 1995

4. ಡಿ.ವಿ.ಜಿ. ಸಂಸ್ಕೃತಿ, 1996

5. ದೇ.ಜ.ಗೌ. ಕನ್ನಡ ಸಂಸ್ಕೃತಿ, 2001